**OS.No.**30/2019
**ಡಿ ಡಬ್ಲ್ಯೂ:2**

**ದಿಃ 25-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ಆರ್ ವಕೀಲರಿಂದ**

ನಾನು ಟಿ ಸಿ ಎಚ್ ವ್ಯಾಸಂಗ ಮಾಡಿರುತ್ತೇನೆ. ನಾನು ಶಿಕ್ಷಕನಾಗಿ ಈಗ ನಿವೃತ್ತಿ ಹೊಂದಿರುತ್ತೇನೆ. ನನ್ನ ಹೆಂಡತಿ ಡಿ.ಇಡಿ ವ್ಯಾಸಂಗ ಮಾಡಿರುತ್ತಾರೆ. ನನ್ನ ಹೆಂಡತಿಗೂ ಸಹ ಸಾಮಾನ್ಯ ಜ್ಞಾನ ಇರುತ್ತದೆ ಎಂದರೆ ಸರಿ. ನನ್ನ ಹೆಂಡತಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಚೆನ್ನಾಗಿ ಇರುತ್ತಾರೆ ಎಂದರೆ ಸಾಕ್ಷಿಯು ಮಾನಸಿಕವಾಗಿ ಚೆನ್ನಾಗಿ ಇರುತ್ತಾರೆ. ಆದರೆ ಅವರಿಗೆ ಓಡಾಡಲು ಸ್ವಲ್ಪ ಹೆಣ್ಣು ಮಕ್ಕಳ ತೊಂದರೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಹೆಂಡತಿಗೆ ದೈಹಿಕವಾಗಿ ತೊಂದರೆ ಇರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಹೆಂಡತಿ ದೈಹಿಕವಾಗಿ ಚೆನ್ನಾಗಿ ಇದ್ದರು ಸಹ ನಾನು ಅವರ ಪರವಾಗಿ ಜಿ.ಪಿ.ಎ ತೆಗೆದುಕೊಂಡು ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವಾದಲ್ಲಿ ಪ್ರತಿವಾದಿಯರು ಯಾರು ಇರುತ್ತಾರೆ ಮತ್ತು ಅವರು ಏನೆಲ್ಲಾ ತಕರಾರು ಸಲ್ಲಿಸಿರುತ್ತಾರೆ ಎಂದು ನನಗೆ ಮಾಹಿತಿ ಇರುತ್ತದೆ. ನಾನು 4 ನೇ ಪ್ರತಿವಾದಿ ಪರವಾಗಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನಾನು 4 ನೇ ಪ್ರತಿವಾದಿ ಅಲ್ಲದೇ ಎಲ್ಲರ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿದ್ದೇನೆ. ನಾನು 2 ರಿಂದ 13 ನೇ ಪ್ರತಿವಾದಿಯರ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ದಾವಾದ ಆಸ್ತಿ ಸ.ನಂ. 96/4 ರಲ್ಲಿ 2 ಎಕರೆ 8 ಗುಂಟೆ ವ್ಯವಸಾಯದ ಜಮೀನು ಎಂದರೆ ಸಾಕ್ಷಿಯು ಮೊದಲು ವ್ಯವಸಾಯದ ಜಮೀನು ಇದ್ದು ಈಗ ನಾವು ನಿವೇಶನ ಮಾಡಿಕೊಂಡು ಮನೆ ಕಟ್ಟಿಕೊಂಡು ಕಣ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ದಾವೆಯನ್ನು ಸಲ್ಲಿಸಿದ ಕಾಲಕ್ಕೆ ಸದರಿ ಜಮೀನು ವ್ಯವಸಾಯದ ಜಮೀನು ಆಗಿತ್ತು ಎಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸಿದ ಕಾಲಕ್ಕೆ ದಾವಾದ ಆಸ್ತಿಯಲ್ಲಿ ನಿವೇಶನ ಮಾಡಿಕೊಂಡು ಮನೆ ಕಟ್ಟಿಕೊಂಡು ಕಣ ಮಾಡಿಕೊಂಡಿದ್ದೆವು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ನಿಡಿ.1 ರಿಂದ 4 ದಾಖಲೆಗಳನ್ನು ಹೊರತುಪಡಿಸಿ ನಾನು ನ್ಯಾಯಾಲಯಕ್ಕೆ ಬೇರೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ನಮ್ಮ ವಕೀಲರಿಗೆ ಕೊಟ್ಟಿದ್ದೆ ಎಂದು ನುಡಿಯುತ್ತಾರೆ. ನಿಡಿ.2 ರಿಂದ 4 ದಾಖಲೆಗಳು 5 ನೇ ಪ್ರತಿವಾದಿಗೆ ಸಂಬಂಧಿಸಿದವು ಎಂದರೆ ಸರಿ. ನಿಡಿ.3 ಮತ್ತು 4 ದಾಖಲೆಗಳು 2025 ನೇ ಸಾಲಿನ ದಾಖಲೆಗಳು ಎಂದರೆ ಸರಿ. ದಾವಾದ ಆಸ್ತಿಗೆ ಸಂಬಂಧಿಸಿದಂತೆ ಭೂ ಪರಿವರ್ತನೆ ಆದ ಬಗ್ಗೆ ಅಥವಾ ಭೂ ಪರಿವರ್ತನೆ ಮಾಡಲು ಅರ್ಜಿ ಕೊಟ್ಟ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಕಾನೂನಿನ ಬಗ್ಗೆ ಸಾಮಾನ್ಯ ಜ್ಞಾನ

ಇರುತ್ತದೆ ಎಂದರೆ ಸರಿ. ಈ ದಾವೆಯನ್ನು ದಾಖಲಿಸಿದ ನಂತರ ಯಾವುದೇ ಭೂ ಪರಿವರ್ತನೆ ಮಾಡದಂತೆ ಹೇಳಿದ್ದರು ಸಹ ನಾನು 2025 ರಲ್ಲಿ ಭೂ ಪರಿವರ್ತನೆ ಆದ ಬಗ್ಗೆ ನಿಡಿ,3 ಮತ್ತು 4 ರಂತೆ ದಾಖಲೆ ಹಾಜರಿಸಿದ್ದೇನೆ ಎಂದರೆ ಸಾಕ್ಷಿಯು ನಾನು ಮೊದಲೇ ಅರ್ಜಿಯನ್ನು ಕೊಟ್ಟಿದ್ದು ನಂತರ ಆದೇಶದ ಆಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಸಿವಿಲ್ ನ್ಯಾಯಾಲಯ ಚನ್ನಗಿರಿಯಲ್ಲಿ ಅಸಲು ದಾವೆ ನಂ. 171/2018 ರಂತೆ ದಾವೆಯನ್ನು ದಾಖಲಿಸಿದ್ದರು ಎಂದರೆ ಸರಿ. ಆ ದಾವೆಯಲ್ಲಿ ಈ ದಾವಾದ 2 ರಿಂದ 6 ನೇ ಪ್ರತಿವಾದಿಯರು ಸಹ ಪಕ್ಷಗಾರರು ಇದ್ದರು ಎಂದರೆ ಸರಿ. ಆ ದಾವೆಯಲ್ಲಿ ಆಸ್ತಿಯನ್ನು ಮಾರಾಟ ಮಾಡದಂತೆ ಮತ್ತು ಭೂ ಪರಿವರ್ತನೆ ಮಾಡದಂತೆ ತಡೆಯಾಜ್ಞೆ ಇದ್ದರು ಸಹ ನಾವು ಭೂ ಪರಿವರ್ತನೆ ಮಾಡಿದ್ದೇವೆ ಎಂದರೆ ಸಾಕ್ಷಿಯು ಆ ರೀತಿ ಆದೇಶ ಇದ್ದ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ ಈ ದಾವಾದ 2 ರಿಂದ 6 ನೇ ಪ್ರತಿವಾದಿಯರು ವಕೀಲರ ಮೂಲಕ ಹಾಜರಾಗಿದ್ದರು ಎಂದರೆ ಸಾಕ್ಷಿಯು 1 ವರ್ಷದ ನಂತರ ಹಾಜರಾಗಿದ್ದರು ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ ಮತ್ತು ಈ ಪ್ರಸ್ತುತ ದಾವೆಯಲ್ಲಿ ಎಲ್ಲಾ ಪ್ರತಿವಾದಿಯರು ವಕೀಲರ ಮೂಲಕ ಹಾಜರಾಗಿ ತಡೆಯಾಜ್ಞೆ ಆದೇಶ ಇದ್ದರು ಸಹ ಅದನ್ನು ಉಲ್ಲಂಘನೆ ಮಾಡಿ ಇ-ಸ್ವತ್ತುಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನಿಮಗೆ ಪರಿಚಯ ಎಂದರೆ ಸಾಕ್ಷಿಯು ಇತ್ತೀಚೆಗೆ ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ದಾಖಲಿಸಿದ ನಂತರ ನಾನು ನ್ಯಾಯಾಲಯಕ್ಕೆ ಬಂದ ನಂತರ 2 ನೇ ಪ್ರತಿವಾದಿ ನನಗೆ ಪರಿಚಯ ಆಗಿರುತ್ತಾರೆ. 1 ಆಸ್ತಿಯನ್ನು ಖರೀದಿ ಮಾಡಬೇಕಾದರೆ ಅದನ್ನು ಯಾರು ಮಾರುತ್ತಿದ್ದಾರೆ, ಅದರ ಮಾಲೀಕರು ಯಾರು, ಅದನ್ನು ಮಾರಾಟ ಮಾಡುವವರಿಗೆ ಹಕ್ಕು ಇರುತ್ತದೆಯೋ ಇಲ್ಲವೋ ಎಂದು ಪರಿಶೀಲನೆ ಮಾಡಬೇಕಾಗುತ್ತದೆ ಎಂದರೆ ಸರಿ. ನಾವು ಆಸ್ತಿಯನ್ನು ಖರೀದಿಸುವಾಗ ಅದರ ಹಿಂದಿನ ಮಾಲೀಕರು ಯಾರು, ಅವರಿಗೆ ಮಾರಾಟ ಮಾಡುವ ಅಧಿಕಾರ ಇರುತ್ತದೆಯೋ ಇಲ್ಲವೋ ಎಂದು ಪರಿಶೀಲನೆ ಮಾಡಿರುತ್ತೇನೆ. ಯೋಗೇಶ್ ಎನ್ನುವವರ ಹೆಸರಿಗೆ ಕ್ರಯ ಪತ್ರ ಆಗಿದ್ದು, ಅವರೇ ಸ್ವಾಧೀನದಲ್ಲಿರುವುದರಿಂದ ನಾನು ಅವರ ಕಡೆಯಿಂದ ಖರೀದಿಸಿರುತ್ತೇನೆ. ಯೋಗೇಶ್‌ರವರು ಕೃಷ್ಣಪ್ಪ ಎನ್ನುವವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದು ದಾಖಲೆ ನೋಡಿರುತ್ತೇನೆ. ನಿಪಿ.10 ರ ಪ್ರಕಾರ ಕೃಷ್ಣಪ್ಪ ತಂದೆ ಕರಿಯಪ್ಪರವರ ಕಡೆಯಿಂದ ಯೋಗೇಶ್ ರವರಿಗೆ ಖರೀದಿಯಾಗಿರುತ್ತದೆ ಎಂದರೆ ಸರಿ. ಕೃಷ್ಣಪ್ಪ ತಂದೆ ಕರಿಯಪ್ಪ ಎನ್ನುವ ಹೆಸರೇ ಬೇರೆ ಮತ್ತು 2 ನೇ ಪ್ರತಿವಾದಿಯೇ ಬೇರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಕೃಷ್ಣಪ್ಪ ತಂದೆ ಕರಿಯಪ್ಪರವರಿಗೆ ಆ ಆಸ್ತಿ ಹೇಗೆ

ಬಂದಿರುತ್ತದೆ ಎಂದು ದಾಖಲೆಯನ್ನು ಪರಿಶೀಲಿಸಿಲ್ಲ ಆದರೆ ಪೌತಿ ಖಾತೆ ಮೂಲಕ ಬಂದಿರುತ್ತದೆ ಎಂದು ದಾಖಲೆಯಲ್ಲಿ ಇತ್ತು ಎಂದು ನುಡಿಯುತ್ತಾರೆ.

ಕೃಷ್ಣಪ್ಪ ಅಲಿಯಾಸ್ ಕೃಷ್ಣ ಮೂರ್ತಿ ಎನ್ನುವವರು 1998 ರಲ್ಲಿ ಮರಣ ಹೊಂದಿದ್ದು 2 ನೇ ಪ್ರತಿವಾದಿಯು ಮರಣ ಹೊಂದಿದ ಕೃಷ್ಣಪ್ಪರವರ ಹೆಸರನ್ನು ದುರುಪಯೋಗ ಮಾಡಿಕೊಂಡು ತನ್ನ ಹೆಸರಿನಲ್ಲಿ ಪೌತಿ ಆಧಾರದ ಮೇರೆಗೆ ಎಂದು ದಾಖಲೆ ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ವಕೀಲರ ಮೂಲಕ ಕಾನೂನಿನ ಅಭಿಪ್ರಾಯ ಪಡೆದಿರುತ್ತೇನೆ. ನಾನು ನನ್ನ ಸ್ನೇಹಿತ ವಕೀಲರ ಮೂಲಕ ಅಭಿಪ್ರಾಯವನ್ನು ಮೌಖಿಕವಾಗಿ ಕೇಳಿ ಪಡೆದಿರುತ್ತೇನೆ. ಆ ಬಗ್ಗೆ ಯಾವುದೇ ಲಿಖಿತ ದಾಖಲೆ ಇಲ್ಲ. ನನಗೆ ಅಭಿಪ್ರಾಯ ನೀಡಿದ ವಕೀಲರ ಹೆಸರು ಈಗ ನೆನಪಿಲ್ಲ. ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿಲ್ಲ. ಕೃಷ್ಣಪ್ಪ ಅಲಿಯಾಸ್ ಕೃಷ್ಣಮೂರ್ತಿರವರ ಹೆಸನರಿಲ್ಲಿರುವ ಆಸ್ತಿಯನ್ನು ಹೇಗಾದರೂ ಮಾಡಿ ಪಡೆಯಬೇಕು ಎನ್ನುವ ಉದ್ದೇಶದಿಂದ ನಾನು, 2, 4 ನೇ ಪ್ರತಿವಾದಿ ಮತ್ತು ಯೋಗೇಶ್ ರವರು ಕೂಡಿಕೊಂಡು ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಆ ಆಸ್ತಿಯ ಮಾಲೀಕ ಇರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ವಂಶವೃಕ್ಷ, ಕೈಬರಹದ ಪಹಣಿ, ಮ್ಯುಟೇಶನ್, ಮರಣ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಪಹಣಿ ಮತ್ತು ಮ್ಯುಟೇಶನ್ ನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಉಳಿದ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವುಗಳ ಅವಶ್ಯಕತೆ ಇಲ್ಲ ಹಾಗಾಗಿ ಹಾಜರುಪಡಿಸುವುದಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಜೀವಂತ ಇರಬಹುದು ನನಗೆ ಆ ಬಗ್ಗೆ ಮಾಹಿತಿ ಇಲ್ಲ. 2 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯೇ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿರುವುದರಿಂದ ಅವರು ನ್ಯಾಯಾಲಯಕ್ಕೆ ಬಂದು ವಿಚಾರಣೆ ಮಾಡಿಕೊಂಡರೆ ನಿಜ ಸಂಗತಿ ಗೊತ್ತಾಗುತ್ತದೆ ಎನ್ನುವ ಉದ್ದೇಶದಿಂದ ನಾನು ಅವರ ಪರವಾಗಿಯೂ ಸಹ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈಗ 4 ನೇ ಪ್ರತಿವಾದಿಯ ಹೆಸರಿನಲ್ಲಿ ಪಹಣಿಯಲ್ಲಿ 20 ಗುಂಟೆ ಕಂಡು ಬರುತ್ತದೆ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಖರೀದಿಸಿದ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ಪತ್ರ ಹಾಜರುಪಡಿಸದೇ ಕೇವಲ 5 ನೇ ಪ್ರತಿವಾದಿಗೆ ಸಂಬಂಧಿಸಿದ ಖರೀದಿ ಪತ್ರ ಮತ್ತು ಇ-ಸ್ವತ್ತುಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

2 ರಿಂದ 13 ನೇ ಪ್ರತಿವಾದಿಯರು ಕೂಡಿಕೊಂಡು ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುವ ಕಾರಣ ನಾನು ಎಲ್ಲರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಈ ದಾವೆಯನ್ನು ತಮ್ಮದೇ ಆಸ್ತಿ ಎಂದು ಹೇಳಿ ದಾಖಲಿಸಿರುತ್ತಾರೆ. ವಾದಿಯರು ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ನಮ್ಮ ವಕೀಲರ ಮೂಲಕ ಕೇಳಿ ತಿಳಿದುಕೊಂಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ವಾದ ಪತ್ರದ ಪ್ಯಾರಾ ನಂ.3 ರಲ್ಲಿ ಹೇಳಿರುವ ವಂಶವೃಕ್ಷ ಸರಿ ಇರುತ್ತದೆ ಎಂದರೆ ಸಾಕ್ಷಿಯು ಅದು ಸುಳ್ಳು ಇರುತ್ತದೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಕುಟುಂಬದ ವಂಶವೃಕ್ಷವನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ಕೃಷ್ಣಮೂರ್ತಿ, ಹನುಮಂತಪ್ಪ, ಲಕ್ಷ್ಮಿದೇವಿ, ಜಯಮ್ಮ ಇವರ ಮರಣದ ನಂತರ ವಾದಿಯರು ಮತ್ತು 1 ನೇ ಪ್ರತಿವಾದಿಯರು ಅವರ ವಾರಸುದಾರರು ಇರುತ್ತಾರೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗೆ ವಾದಿಯರು ಮತ್ತು 1 ನೇ ಪ್ರತಿವಾದಿಯರು ಮಾಲೀಕರು ವ ಸ್ವಾಧೀನದಾರರು ಇರುತ್ತಾರೆ ಎಂದರೆ ಸರಿಯಲ್ಲ. ಈಗಲೂ ಸಹ ವಾದಿ ಮತ್ತು 1 ನೇ ಪ್ರತಿವಾದಿಯರು ದಾವಾದ ಆಸ್ತಿಯಲ್ಲಿ ಸಾಗುವಳಿ ಮಾಡಿ ಮೆಕ್ಕೆಜೋಳ ಬೆಳೆಯುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯಲ್ಲಿ ಕಣ ಮಾಡಿ ಶೆಡ್ಡನ್ನು ಹಾಕಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ನಮ್ಮ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ದಾವಾದ ಆಸ್ತಿಯು ಚನ್ನಗಿರಿಯಿಂದ 1 ಕಿ.ಮೀ ದೂರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು 3 ಕಿ.ಮೀ ದೂರದಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಚನ್ನಗಿರಿ ಬಾಪೂಜಿ ಆಸ್ಪತ್ರೆಯ ಹತ್ತಿರದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ಚನ್ನಗಿರಿ-ಚಿತ್ರದುರ್ಗ ಬೈಪಾಸ್ ರಸ್ತೆಯ ಪಕ್ಕದಲ್ಲಿ ಬರುತ್ತದೆ ಎಂದರೆ ಸರಿ. ದಾವಾದ ಆಸ್ತಿಯ ಅರ್ಧ ಕಿ.ಮೀ ದೂರದಲ್ಲಿ ಲೇಔಟ್ ಆಗಿರುತ್ತದೆ ಎಂದರೆ ಸರಿ. 2019 ರಲ್ಲಿ ದಾವಾದ ಆಸ್ತಿಗೆ ಒಳ್ಳೆಯ ಬೆಲೆ ಇತ್ತು ಎಂದರೆ ಸರಿ. ದಾವಾದ ಆಸ್ತಿಗೆ ಒಳ್ಳೆಯ ಬೆಲೆ ಇರುವುದರಿಂದ ಅದನ್ನು ಹೇಗಾದರೂ ಮಾಡಿ ಹೊಡೆಯಬೇಕು ಎನ್ನುವ ಉದ್ದೇಶದಿಂದ 2 ರಿಂದ 13 ನೇ ಪ್ರತಿವಾದಿಯರು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯು ವಾದಿಯರು ಮತ್ತು 1 ನೇ ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯಲ್ಲಿ ವಾದಿಯರು ಮತ್ತು 1 ನೇ ಪ್ರತಿವಾದಿಯರ ವಾರಸುದಾರರು ಜಂಟಿ ಸ್ವಾಧೀನದಲ್ಲಿ ಇದ್ದು ಅವರಿಗೆಲ್ಲಾ ಹಿಸ್ಸೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. 2 ರಿಂದ 13 ನೇ ಪ್ರತಿವಾದಿಯರು ಎಷ್ಟು ಆಸ್ತಿಯನ್ನು ಖರೀದಿಸಿರುತ್ತಾರೆ, ಅವರು ಖರೀದಿಸಿದ ಆಸ್ತಿಗಳ ಚೆಕ್‌ಬಂದಿಗಳನ್ನು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಅವರು ಎಷ್ಟು ವಿಸ್ತೀರ್ಣದ ಆಸ್ತಿಗಳನ್ನು

ಖರೀದಿಸಿದ್ದಾರೆ ಎಂದು ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿಯು 2017 ಅಥವಾ 2018 ರಲ್ಲಿ 4 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ. ಅವರು ಖರೀದಿಸಿದ ಆಸ್ತಿಯ ಚೆಕ್ ಬಂದಿ ನನಗೆ ನೆನಪಿಲ್ಲ. ನಾಮಕಾವಸ್ಥೆಯಲ್ಲಿ ಖರೀದಿ ಪತ್ರ ಆಗಿರುವುದರಿಂದ ನನಗೆ ಚೆಕ್ ಬಂದಿಗಳನ್ನು ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ನಾನು ಯೋಗೇಶ್‌ರವರಿಂದ ದಾವಾದ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಯನ್ನು ಸೃಷ್ಟಿ ಮಾಡಿಕೊಂಡ ನಂತರ ನಾನು ಬೇರೆ ಬೇರೆಯವರಿಗೆ ತುಂಡು ತುಂಡಾಗಿ ಆಸ್ತಿಗಳಿಗೆ ಸಂಬಂಧಿಸಿದಂತೆ ಪತ್ರಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾದ ಆಸ್ತಿಗೆ ವಾದಿಯರು ಮತ್ತು 1 ನೇ ಪ್ರತಿವಾದಿಯರೇ ಮಾಲೀಕರು ವ ಕಬ್ಜದಾರರು ಇರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಹೆಚ್ ಟಿ ವಕೀಲರಿಂದ**

ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ವಿನಂತಿಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.